ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ನ.ರಾ.ಪುರ

ಸಿ.ಸಿ.ನಂಃ **31/2026**

ಸಾಕ್ಷಿದಾರರ ಹೆಸರು ಃ ಶೈಲೇಶ್

ತಂದೆಯ ಹೆಸರು ಃ ಕೆ ವಿ ನಾಗರಾಜ್

ವಯಸ್ಸು ಃ **38** ವರ್ಷ

ಉದ್ಯೋಗ ಃ ಕೃಷಿ

ವಾಸಸ್ಥಳ ಃ ಕಣಿವೆ

ಸಿ.ಡಬ್ಲ್ಯೂ - **1**

ಪಿ.ಡಬ್ಲ್ಯೂ - **1**

ದಿನಾಂಕಃ **11.5.2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ

ದಿನಾಂಕಃ 15.02.2017 ರಂದು ಬೆಳಗಿನ ಜಾವ 3 ರಿಂದ 4 ಗಂಟೆ ಸಮಯದಲ್ಲಿ ನಮ್ಮ ಮನೆಯ ಪಕ್ಕದಲ್ಲಿರುವ ಗೋಡನ್ ನಲ್ಲಿಟ್ಟಿರುವ 10 ಚೀಲ ಅಡಿಕೆ ಮೂಟೆ ಮತ್ತು ಒಂದುವರೆ ಚೀಲ ಕಾಳುಮೆಣಸು ಅನ್ನು ಯಾರೋ ಕಳ್ಳರು ಗೋಡನ್ ನ ಬೀಗ ಮುರಿದು ಸದರಿ ಮೂಟೆಗಳನ್ನು ಟಾಟಾ ಎ ಸಿ ಗೂಡ್ಸ್ ನಲ್ಲಿ ಹಾಕುತ್ತಿರುವ ಶಬ್ದವನ್ನು ಕೇಳಿ ನಾನು ಹೊರಗಡೆ ಬಂದು ನೋಡುವಷ್ಟರಲ್ಲಿ ಯಾರೋ ಕಳ್ಳರು ಮೂಟೆಗಳನ್ನು ಗೂಡ್ಸ್ ವಾಹನಕ್ಕೆ ತುಂಬಿಸಿಕೊಂಡು ನಮ್ಮ ಮನೆಯ ಗೇಟ್ ಹತ್ತಿರದಿಂದ ಚಲಾಯಿಸಿಕೊಂಡು ಹೋಗಿದ್ದು ನಾನು ನೋಡಿರುತ್ತೇನೆ. ನಂತರ ಎದುರುಗಡೆ ಮನೆಯ ವಿನಯ್ ರವರಿಗೆ ನಾನು ಕರೆ ಮಾಡಿ ವಿಷಯ ತಿಳಿಸಿ ನಾವಿಬ್ಬರೂ ಸದರಿ ಗೂಡ್ಸ್ ವಾಹನವನ್ನು ಹುಡುಕಿದ್ದು ಸಿಕ್ಕಿರುವುದಿಲ್ಲ. ಸದರಿ ಗೂಡ್ಸ್ ವಾಹನ ಸಂಃ ಕೆಎ-20-ಡಿ-5378 ಆಗಿರುತ್ತದೆ. ನಂತರ ಮಾರನೇ ದಿನ ದೂರನ್ನು ನೀಡಿರುತ್ತೇನೆ. ನಂತರ ಪೊಲೀಸರು ಅದೇ ದಿನ ಸ್ಥಳಕ್ಕೆ ಬಂದು ನಾನು ತೋರಿಸಿರುವ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಮಹಜರ್ ಮಾಡಿ ಫೋಟೋ ತೆಗೆದಿರುತ್ತಾರೆ.

ನಂತರ ದಿನಾಂಕಃ 19.02.2017 ರಂದು ಕಳ್ಳತನ ಮಾಡಿರುವ ಕಳ್ಳರು ಹಾಗೂ ಅಡಿಕೆ ಮೂಟೆಗಳು ಸಿಕ್ಕಿವೆ ಎಂದು ನನಗೆ ತಿಳಿಸಿದ್ದು, ನಾನು ಠಾಣೆಗೆ ಹೋಗಿ ನೋಡಲು ಅಲ್ಲಿ ಇಬ್ಬರು

ಆಸಾಮಿಗಳು ಇದ್ದು, ಸದರಿಯವರು ಕಳ್ಳತನ ಮಾಡಿರುವುದಾಗಿ ನನಗೆ ತಿಳಿಸಿದ ಮೇರೆಗೆ ಅವರನ್ನು ವಿಚಾರಿಸಿದಾಗ ಅವರ ಹೆಸರು ಕುಂಜು ಮೋನು ಮತ್ತು ವಿಜಯ್ ಕುಮಾರ್ ಶೆಟ್ಟಿ ಎಂದು ತಿಳಿಸಿರುತ್ತಾರೆ. ಅಲ್ಲಿ ಇರುವ ಅಡಿಕೆ ಮತ್ತು ಕಾಳುಮೆಣಸು ಚೀಲಗಳನ್ನು ತೋರಿಸಿದ್ದು, ಅದನ್ನು ನಾನು ಗುರುತಿಸಿದ ಮೇರೆಗೆ ಅದನ್ನು ಚಾಸಾ-8 ಮತ್ತು 9 ರವರ ಸಮಕ್ಷಮ ನನಗೆ ನೀಡಿರುತ್ತಾರೆ. ಸದರಿ ಸಮಯದಲ್ಲಿ ಮಹಜರ್ ಮಾಡಿದ್ದು, ಫೋಟೋ ತೆಗೆದಿರುತ್ತಾರೆ. ಪೊಲೀಸರು ಪ್ರತಿ ಚೀಲದಲ್ಲಿ 100 ಗ್ರಾಂ ಸ್ಯಾಂಪಲ್ ತೆಗೆದಿರುತ್ತಾರೆ.

ಸಾಕ್ಷಿ ದೂರಿನ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1, ಸಾಕ್ಷಿಯ ಸಹಿಯನ್ನು ಈಗಾಗಲೇ ನಿಪಿ-1(ಎ) ಎಂದು ಮೂಲ ಸಿಸಿನಂ: 63/2018 ರಲ್ಲಿ ಗುರುತಿಸಲಾಗಿರುತ್ತದೆ. ಸಾಕ್ಷಿ ಮಹಜರಿನ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಮೂಲ ಸಿಸಿನಂ: 63/2018 ರಲ್ಲಿ ಗುರುತಿಸಲಾಗಿರುತ್ತದೆ. ಸಾಕ್ಷಿ ಫೋಟೋ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿ ಅಡಿಕೆ ಜಪ್ತು ಮಹಜರಿನ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಮೂಲ ಸಿಸಿನಂ: 63/2018 ರಲ್ಲಿ ಗುರುತಿಸಲಾಗಿರುತ್ತದೆ. ಸಾಕ್ಷಿ ಬೀಗವನ್ನು ನೋಡಿ ಗುರುತಿಸಿದ್ದು ಅದನ್ನು ಎಂಒ-1 ಎಂದು ಮೂಲ ಸಿಸಿನಂ: 63/2018 ರಲ್ಲಿ ಗುರುತಿಸಲಾಗಿರುತ್ತದೆ. ಸಾಕ್ಷಿ 10 ಅಡಿಕೆ ಸ್ಯಾಂಪಲ್ , 2 ಕಾಳುಮೆಣಸು ಸ್ಯಾಂಪಲ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಎಂಒ-2 ರಿಂದ 13 ಎಂದು ಮೂಲ ಸಿಸಿನಂ: 63/2018 ರಲ್ಲಿ ಗುರುತಿಸಲಾಗಿರುತ್ತದೆ. ಸಾಕ್ಷಿ ಆರೋಪಿತರನ್ನು ವಿ ಸಿ ಮುಖಾಂತರ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಎಂ ಸಿ ವಕೀಲರಿಂದ:</u>

ಕೃತ್ಯ ನಡೆದ ದಿನದಂದು ಆರೋಪಿತರೇ ಕೃತ್ಯ ಮಾಡಿದ ಬಗ್ಗೆ ನಾನು ನೋಡಿರುವುದಿಲ್ಲ. ಆ ದಿನ ನಾನು ವಾಹನ ಸಂ:ಕೆಎ-20-ಡಿ-5378 ವಾಹನವನ್ನು ಕೃತ್ಯ ನಡೆದ ಸ್ಥಳದಲ್ಲಿ ನೋಡಿರುವುದಿಲ್ಲ. ನಿಪಿ-1, 2 ಮತ್ತು 4 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ಸದರಿ ನಿಪಿ-1, 2 ಮತ್ತು 4 ಕ್ಕೆ ಸಹಿ ಹಾಕುವಂತೆ ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ.ನಿಪಿ-3 ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ಯಾರು ಯಾವಾಗ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಎಂಒ-2 ರಿಂದ 13 ರಂತೆ ಮಾದರಿ ಪರೀಕ್ಷೆಗಾಗಿ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ಎಂಒ-2 ರಿಂದ 13 ವಸ್ತುಗಳು ನನಗೆ

ಸೇರಿದ ವಸ್ತುಗಳು ಎಂದು ನಿರೂಪಿಸಲು ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿ. ಎಂಒ-2 ರಿಂದ 13 ವಸ್ತುಗಳು ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ದೊರಕುತ್ತವೆ ಎಂದರೆ ಸರಿ. ನಾನು ಅಡಿಕೆ ಮತ್ತು ಕಾಳುಮೆಣಸು ಬೆಳೆಯುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ನೀಡಿರುವುದಿಲ್ಲ ಎಂದರೆ ಸರಿ. ಈ ದಿನ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳನ್ನು ಪೊಲೀಸರು ಹೇಳಿದಂತೆ ನುಡಿದಿರುತ್ತೇನೆಂದರೆ ಸರಿ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಃ ಮರುವಿಚಾರಣೆ ಇಲ್ಲಃಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

Sd/-
ಪ್ರ.ದ.ನ್ಯಾ.ದಂಃ ನ.ರಾ.ಪುರ.

ಸಾಕ್ಷಿ ಸಹಿಃ